ಓ.ಎಸ್. ನಂ. 44/2020 ಡಿ.ಡಬ್ಲ್ಯೂ- 2

**ಸಾಕ್ಷಿಯನ್ನು ದಿನಾಂಕ 27.9.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ವಿ ವಕೀಲರಿಂದಃ**

ನನಗೆ 58 ವರ್ಷವಾಗಿರುತ್ತದೆ. ನಾನು ಹುಟ್ಟಿದ ವರ್ಷ ನನಗೆ ಗೊತ್ತಿರುವುದಿಲ್ಲ. ನಾನು 4 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಅಲ್ಪಸ್ವಲ್ಪ ಬರುತ್ತದೆ. ನಾನು ಹಂಚಿಪುರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಮ್ಮ ಗ್ರಾಮದಲ್ಲಿ 250 ಮನೆಗಳು ಇರುತ್ತವೆ. ಈ ಕೇಸಿನ ವಾದಿ ಪ್ರತಿವಾದಿಯು ಹಂಚಿಪುರ ಗ್ರಾಮದವರಾಗಿರುತ್ತಾರೆ. 250 ಮನೆಗಳ ಜನರಿಗೆ ಏನೆಲ್ಲ ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು 1 ನೇ ಪ್ರತಿವಾದಿಯ ಪರ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನನಗೆ ಈ ಕೇಸಿನ ಎಲ್ಲ ವಿಚಾರ ಗೊತ್ತಿರುತ್ತದೆ. ಈ ದಾವೆಯನ್ನು ಕೆಂಡಗಣ್ಣಪ್ಪ ಎಂಬುವವರು ನಟರಾಜು ಎಂಬುವವರ ಮೇಲೆ ಹಾಕಿರುತ್ತಾರೆ. ದಾವಆಸ್ತಿಯ ಸರ್ವೆ ನಂಬರ್ 32/3, ವಿಸ್ತೀರ್ಣ 1-30 ಎಕರೆ ಆಗಿರುತ್ತದೆ. ನಾನು ಪ್ರತಿವಾದಿಯರ ಸಂಬಂಧಿಕ ಎಂದರೆ ಸಾಕ್ಷಿದಾರರು ಒಂದೇ ಗ್ರಾಮದವರು ಎನ್ನುವರು. ನೀವು ಈ ದಾವೆಗೆ ಪ್ರತಿವಾದಿಯರು ಸಲ್ಲಿಸಿರುವ ತಕರಾರು ಹಾಗೂ ವಾದಿ ಮತ್ತು ಪ್ರತಿವಾದಿಯರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ನೋಡಿರುತ್ತೀನೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎನ್ನುವರು. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ನಾನು ಸದರಿ ಪ್ರಮಾಣಪತ್ರದಲ್ಲಿರುವ ವಿಚಾರಗಳನ್ನು ತಿಳಿದುಕೊಳ್ಳದೇ ನೋಟರಿಯವರ ಮುಂದೆ ಸಹಿ ಮಾಡಿ ಬಂದಿರುತ್ತೇನೆ ಎಂದರೆ ಸರಿ. ನನ್ನ ಪ್ರಮಾಣಪತ್ರದಲ್ಲಿ ಪ್ರತಿವಾದಿಯರು ಎಂದಿಗೂ ಸಹ ದಾವಆಸ್ತಿಯ ಸ್ವಾಧೀನಾನುಭವವನ್ನು ಹೊಂದಿರುವುದಿಲ್ಲ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎನ್ನುವರು. ಗುರುಮಲ್ಲಮ್ಮ ಮತ್ತು ಚಿಕ್ಕಾಲಮ್ಮ ರವರು ಮಾಡಿಕೊಂಡಿದ್ದಾರೆ ಎಂದು ಹೇಳುವ ಅದಲು ಬದಲು ಪತ್ರವನ್ನು ಗ್ರಾಮದಲ್ಲಿ ಬರೆಯಲಾಗಿರುತ್ತದೆ. ಸದರಿ ಪತ್ರವನ್ನು ಬರೆದಾಗ ನಾನು ಇರಲಿಲ್ಲ. 1 ನೇ ಪ್ರತಿವಾದಿಯ ತಾಯಿಯ ಹೆಸರು ಚಿಕ್ಕಾಲಮ್ಮ ಆಗಿದ್ದು, ಅವರು ತೀರಿಕೊಂಡು 15 ವರ್ಷಕ್ಕಿಂತ ಜಾಸ್ತಿಯಾಗಿರುತ್ತದೆ. 1 ನೇ ಪ್ರತಿವಾದಿಗೆ 3 ಜನ ಸಹೋದರರು ಇದ್ದು ಅವರ ಹೆಸರು ಸಿದ್ದಮಲ್ಲಪ್ಪ ಬಸವಣ್ಣ ಮತ್ತು ಶಿವನಂಜಪ್ಪ ಆಗಿರುತ್ತದೆ. ಸಿದ್ದಮಲ್ಲಪ್ಪ ತೀರಿಕೊಂಡು 15 ವರ್ಷವಾಗಿರುತ್ತದೆ. ನಿಡಿ7 ರಲ್ಲಿ 1 ನೇ ಪ್ರತಿವಾದಿಯ ಹೆಸರು ಇರುತ್ತದಾ ನೋಡಿ ಎಂದರೆ ಸಾಕ್ಷಿದಾರರು ಕಣ್ಣು ಕಾಣಿಸುವುದಿಲ್ಲ ಎನ್ನುವರು. ಸಣ್ಣಪ್ಪರವರಿಗೆ ಇಬ್ಬರು ಹೆಂಡತಿಯರು ಇದ್ದು, ಮೊದಲನೆಯವರ ಹೆಸರು ಪುಟ್ಟತಾಯಮ ಮತ್ತು ಎರಡನೆಯವರ ಹೆಸರು ಗುರುಮಲ್ಲಮ್ಮ ಆಗಿರುತ್ತದೆ. ನಿಡಿ9 ರಲ್ಲಿ ಗುರುಮಲ್ಲಮ್ಮನ ಗಂಡನ ಹೆಸರು ಪುಟ್ಟತ್ತಪ್ಪ ಎಂದು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯಲ್ಲಿ ಗುರುಮಲ್ಲಮ್ಮನ ಮಗನ

ಹೆಸರು ರಾಜಪ್ಪ ಎಂದು ಇರುತ್ತದೆ ಎಂದರೆ ಸಾಕ್ಷಿದಾರರು ರಾಜಪ್ಪ ಅವರ ಮಗನಾಗಿರುತ್ತಾನೆ ಎನ್ನುವರು. ಸದರಿ ದಾಖಲೆಯಲ್ಲಿ ರಾಜಪ್ಪನ ತಂದೆಯ ಹೆಸರು ಪುಟ್ಟತ್ತಪ್ಪ ಎಂದು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗುರುಮಲ್ಲಮ್ಮನವರು ನಾನು ಚಿಕ್ಕವನಿದ್ದಾಗ ನಮ್ಮ ಊರಿನಲ್ಲಿದ್ದರು, ಆಗ ನನಗೆ ಅಂದಾಜು 20 ವರ್ಷವಾಗಿತ್ತು. ಸದರಿ ಸಮಯದಲ್ಲಿ ಸಣ್ಣಪ್ಪ ಎಲ್ಲಿದ್ದರು ಎಂದರೆ ಸಾಕ್ಷಿದಾರರು ಅವರು ತೀರಿಕೊಂಡಿದ್ದರು ಎನ್ನುವರು. ನಿಡಿ9 ರಲ್ಲಿ ಕ್ರಮ ಸಂಖ್ಯೆ 532 ರಲ್ಲಿ ಪುಟ್ಟತ್ತಪ್ಪನ ಹೆಂಡತಿ ಪುಟ್ಟಮ್ಮ ಎಂದು ನಮೂದಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಡಿ9 ರ ಪ್ರಕಾರ ಪುಟ್ಟತ್ತಪ್ಪನಿಗೆ ಗುರುಮಲ್ಲಮ್ಮ ಮತ್ತು ಪುಟ್ಟಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿರುವುದಿಲ್ಲ. ಅದಲು ಬದಲು ಪತ್ರ ಬರವಣಿಗೆಯಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಹಿಂದೆ ಬರೆದಿರುವ ಅದಲು ಬದಲು ಪತ್ರದ ಬಗ್ಗೆ ಗೊತ್ತಿರುವುದಿಲ್ಲ, ಆದರೆ ಪಂಚಾಯಿತಿಯಲ್ಲಿ ಅದಲು ಬದಲು ಪತ್ರದ ಬಗ್ಗೆ ಮಾತನಾಡಿರುತ್ತಾರೆ ಎನ್ನುವರು. 4-5 ವರ್ಷದ ಹಿಂದೆ ಊರಿನಲ್ಲಿ ಪಂಚಾಯಿತಿ ಸೇರಿದ್ದರು. ಸದರಿ ಪಂಚಾಯಿತಿಯಲ್ಲಿ 20-30 ಜನ ಸೇರಿದ್ದರು. ಅವರ ಹೆಸರು ಮಹದೇವಸ್ವಾಮಿ, ಗಣಪತಿ, ಗುರುಸಿದ್ದಪ್ಪ, ತಮ್ಮಯ್ಯಪ್ಪ, ನಾನು (ಶಿವಕುಮಾರ್), ಕುಮಾರ್, ಇಬ್ಬರು ಹೆಸರಿನ ಮಲ್ಲಿಕಾರ್ಜುನ ಇದ್ದರು. ಸದರಿ ಪಂಚಾಯಿತಿಯಲ್ಲಿ ದಾವ ಆಸ್ತಿಯು ವಾದಿಗೆ ಸೇರಬೇಕೆಂದು ವಾದಿಯರು, ಪ್ರತಿವಾದಿಯರಿಗೆ ಸೇರಬೇಕೆಂದು ಪ್ರತಿವಾದಿಯರು ಹೇಳುತ್ತಿದ್ದರು. ಸದರಿ ಪಂಚಾಯಿತಿಯಲ್ಲಿ ಬರವಣಿಗೆ ಆಗಿರುತ್ತದಾ ಎಂದರೆ ಸಾಕ್ಷಿದಾರರು ವಾದಿಯು ನಾನು ಒಪ್ಪುವುದಿಲ್ಲ ಎಂದು ಪಂಚಾಯಿತಿಯಿಂದ ಹೊರಗೆ ಬಂದಿರುತ್ತಾರೆ ಎನ್ನುವರು. ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.